ದಿನಾಂಕಃ 14-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್. ವಿ. ಆರ್. ವಕೀಲರಿಂದಃ

ನಾನು ಹಾಗೂ ಆರೋಪಿ ಹರಿಹರದ ಎಸ್. ಜೆ. ವಿ. ಪಿ. ಕಾಲೇಜಿನಲ್ಲಿ ಬಿ.ಬಿ.ಎಂ. ಓದುತ್ತಿದ್ದಾಗ ಪರಿಚಯ. ಆರೋಪಿ ಹಾಗೂ ನಾನು ಒಂದೇ ರೂಮಿನಲ್ಲಿ ಇರಲಿಲ್ಲ. ಆರೋಪಿಯ ಕುಟುಂಬದ ಬಗ್ಗೆ ಸಂಪೂರ್ಣವಾಗಿ ಗೊತ್ತಿರುವುದಿಲ್ಲ. ಆರೋಪಿಗೆ 3 ಜನ ಅಣ್ಣ ತಮ್ಮಂದಿರು ಒಬ್ಬ ಅಕ್ಕ ಇರುತ್ತಾಳೆ. ಆರೋಪಿ ಕುಟುಂಬ ರಟ್ಟೀಹಳ್ಳಿಯಲ್ಲಿ ಸ್ಥಿತಿವಂತರು ಇರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಆರೋಪಿ ಸಿಮೇಂಟ್, ಶಾವಿಗೆ, ಪಾರ್ಮ ಹಾಗೂ ಗುತ್ತಿಗೆದಾರ ಕೆಲಸ ಮಾಡುತ್ತಾನೆ. ರಟ್ಟೀಹಳ್ಳಿಯಲ್ಲಿ ಆರೋಪಿಯ ಕುಟುಂಬಕ್ಕೆ 2 ಎಕರೆ ಅಡಿಕೆ ತೋಟ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಆರೋಪಿಯ ಕಿರಾಣಿಯ ಮಳಿಗೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಆರೋಪಿ 9 ರಿಂದ 10 ರೂಮಗಳನ್ನು ಬಾಡಿಗೆಗೆ ಕೊಟ್ಟಿರುತ್ತಾನೆ ಎನ್ನುವುದು ನಿಜ. ಆರೋಪಿಯದು ಪಾರ್ಲೆ ಬಿಸ್ಕೇಟ ಏಜೆನ್ಸಿ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಆರೋಪಿಯದು ಅಡುಗೆ ಎಣ್ಣೆಯ ಹೊಲ್ ಸೇಲ್ ವ್ಯಾಪಾರ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಾನು ಹಾಗೂ ಆರೋಪಿ ಹರಿಹರದ ಎಸ್. ಜೆ. ವಿ. ಪಿ. ಕಾಲೇಜಿನಲ್ಲಿ ಓದುತ್ತಿದ್ದ ವರ್ಷ ನೆನಪಿರುವುದಿಲ್ಲ. ಪಿಯುಸಿಯ ನಂತರ ಬಿಬಿಎಂ ಇರುತ್ತದೆ. ಬಿಬಿಎಂ ನಾನು ಪೂರ್ಣಗೊಳಿಸಿದ ವರ್ಷ ನೆನಪಿರುವುದಿಲ್ಲ. ಅದಾದನಂತರ ಬೆಂಗಳೂರಿನಲ್ಲಿ ಎಂಬಿಎ ಓದಿರುತ್ತೇನೆ. ಎಂಬಿಎ ಪೂರ್ಣಗೊಳಿಸಿದ ವರ್ಷ ನಿಖರವಾಗಿ ಗೊತ್ತಿರುವುದಿಲ್ಲ. ಎಂ ಬಿ ಎ ಪೂರ್ಣಗೊಳಿಸಿದ ನಂತರ ಇನಪೋಸಿಸ್ ನಲ್ಲಿ ಅಸಿಸ್ಟಂಟ್ ಅಕೌಂಟೆಂಟ್ ಆಗಿ ನೌಕರಿಗೆ ಸೇರಿಕೊಂಡಿದ್ದೆ. ಇನಪೋಸಿಸ್ ಕಂಪನಿಯಲ್ಲಿ ಕೆಲಸ ಮಾಡುವ 6 ತಿಂಗಳ ಮೊದಲು ರಂಗರಾವ್ ಆ್ಯಂಡ್ ಸನ್ಸ ಕಂಪನಿಯಲ್ಲಿ ಕೆಲಸ ಮಾಡಿರುತ್ತೇನೆ. ಸದರಿ ಕಂಪನಿಯಲ್ಲಿ ನನಗೆ 14 ರಿಂದ 15 ಸಾವಿರ ಕೊಡುತ್ತಿದ್ದರು. ಸದರಿ ಕಂಪನಿಯಲ್ಲಿ ನನಗೆ ನಗದಾಗಿ ಸಂಬಳವನ್ನು ಕೊಟ್ಟಿರುತ್ತಾರೆ. ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆ. ತಿಂಗಳಿಗೆ 1 ವರೆ ಸಾವಿರ ರೂ. ಖರ್ಚು ಇತ್ತು. ಇನಪೋಸಿಸ್ ಕಂಪನಿಯಲ್ಲಿ ನನಗೆ 25 ಸಾವಿರ ರೂ. ಸಂಬಳ ಕೊಡುತ್ತಿದ್ದರು. ಸದರಿ ಸಂಬಳ ನನ್ನ ಖಾತೆಗೆ ಜಮೆ ಆಗುತ್ತಿತ್ತು. ಇನಪೋಸಿಸ್ ಕಂಪನಿಯಲ್ಲಿ ಎಷ್ಟು ವರ್ಷ ಕೆಲಸ ಮಾಡಿರುತ್ತೇನೆ ಎಂದು ನೆನಪಿರುವುದಿಲ್ಲ. ಇನಪೋಸಿಸ್ ಕಂಪನಿಯನ್ನು ಬಿಟ್ಟು ನಂತರ ಬೇರೆ ಎಲ್ಲು ಕೆಲಸ ಮಾಡಿಲ್ಲ. ನಮ್ಮ ಕುಟುಂಬಕ್ಕೆ 6 ಎಕರೆ ಜಮೀನು ಈಗ 2 ಎಕರೆ ಜಮೀನು ಇರುತ್ತದೆ. 4 ಎಕರೇ ಜಮೀನನ್ನು ಮಾರಾಟ ಮಾಡಿದ ವರ್ಷ ನೆನಪಿರುವುದಿಲ್ಲ. ಇನಪೋಸಿಸ್ ಕಂಪನಿಯಲ್ಲಿ

ನನಗೆ ಸಂಬಳ ನನ್ನ ಐಸಿಐಸಿಐ ಬ್ಯಾಂಕಿನ ಖಾತೆಗೆ ಜಮೆ ಆಗುತ್ತಿತ್ತು. ಕೊನೆಯ ಸಂಬಳ ನನ್ನ ಬ್ಯಾಂಕ ಖಾತೆಗೆ ಜಮೆ ಆಗಿರುತ್ತದೆ. 2016-17 ರಿಂದ ನಾನು ಗುತ್ತಿಗೆದಾರ ಕೆಲಸವನ್ನು ಪ್ರಾರಂಭ ಮಾಡಿರುತ್ತೇನೆ. ಸದರಿ ಗುತ್ತಿಗೆದಾರ ಕೆಲಸ ಪ್ರಾರಂಭ ಮಾಡಿದಾಗ ಪ್ರಾರಂಭದ ಬಂಡವಾಳ ಖಾತೆಯಲ್ಲಿ ಎಷ್ಟು ಇತ್ತು ಎಂದು ನೆನಪಿರುವುದಿಲ್ಲ. 2016-17 ರಲ್ಲಿ ಯಾವ ಯಾವ ಕೆಲಸ ಮಾಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. 2016-17 ಹಾಗೂ 2017-18 ರಲ್ಲಿ ರಿಟರ್ನ್ಸ ಸಲ್ಲಿಸಿದ್ದು, ಅವುಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. 2016-17 ರಲ್ಲಿ ನನ್ನ ಉತ್ಪನ್ನ ಎಷ್ಟು ಇತ್ತು ಎಂದು ಹೇಳಲು ಆಗುವುದಿಲ್ಲ. ಆರೋ ಪ್ಲಾಂಟ್ , ರೋಡ್ ಕಾಂಟ್ರೆಕ್ಟ ಹಾಗೂ ಸೋಲಾರ್ ಇನ್ಸಾಟ್ಲೇಷನ್ ಕೆಲಸ ಮಾಡಿರುತ್ತೇನೆ. ಈ ಮೂರು ಕೆಲಸಗಳಲ್ಲಿ ಲಾಭ ಇಟ್ಟುಕೊಂಡು ಮಾಡುತ್ತದೆ. ಆರೋ ಪ್ಲಾಂಟನ್ನು ನಮ್ಮ ಪರ್ಮನಡಿಯಲ್ಲಿ ಮಾಡಿರುತ್ತೇನೆ. ನಮ್ಮ ಪರ್ಮನ ಹೆಸರು ಆರ್. ಬಿ. ಎಂಟರ್ ಪ್ರೈಸಸ್. 2016 ರಿಂದ ಇಲ್ಲಿಯವರೆಗೆ ಆರೋ ಪ್ಲಾಂಟ್‌ನ್ನು ಎಷ್ಟು ಇನ್ಸಾಟ್ಲ ಮಾಡಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಆರೋ ಇನ್ಸಾಟ್ಲ್ ಮಾಡಬೇಕೆಂದರೆ ಅದರ ಪ್ರಕ್ರಿಯೇಗಳು ಏನೆಂದು ಗೊತ್ತಿರುತ್ತದೆ

2. ನಾನು ಹಾಕಿರುವ 2 ಚೆಕ್ಕುಗಳು ಪರ್ಮ ಚೆಕ್ಕುಗಳು ಇರುತ್ತವೆ. 2 ಚೆಕ್ಕುಗಳು ರೇಣುಕಾ ಟ್ರೆಡರ್ಸ ಹೆಸರಿನಲ್ಲಿ ಇರುತ್ತವೆ. ರೇಣುಕಾ ಟ್ರೆಡರ್ಸ ಹೆಸರಿನಲ್ಲಿ ನೋಟಿಸನ್ನು ಮಾಡಿರುತ್ತೇವೆ. ರೇಣುಕಾ ಟ್ರೆಡರ್ಸ ಹೆಸರಿನಲ್ಲಿ ನೋಟಿಸನ್ನು ಮಾಡಿಲ್ಲ. ಶ್ರೀ ರೇಣುಕಾ ಟ್ರೆಡರ್ಸ ಪರ್ಮ ಆರೋಪಿಯನ್ನಾಗಿ ಮಾಡಿಲ್ಲ. ನಮ್ಮ ವಕೀಲರಿಗೆ ಸಂಪೂರ್ಣ ಮಾಹಿತಿಯನ್ನು ಕೊಟ್ಟಿರುತ್ತೇನೆ. ಚೆಕ್ಕುಗಳು ಶ್ರೀ ರೇಣುಕಾ ಟ್ರೆಡರ್ಸ ಪರ್ಮಗೆ ಸಂಬಂದಪಟ್ಟವು ಎಂದು ನಮ್ಮ ವಕೀಲರಿಗೆ ಹೇಳಿರುತ್ತೇನೆ. ನೋಟಿಸನ್ನು ತಯಾರು ಮಾಡಿದ ನಂತರ ಅದನ್ನು ಓದಿರುತ್ತೇನೆ ಹಾಗುಾ ಸಹಿ ಮಾಡಿರುತ್ತೇನೆ. ಸದರಿ ಪರ್ಮಗೆ ಆರೋಪಿಯೆ ಮಾಲಕ ಹಾಗಾಗಿ ಪರ್ಮನ್ನು ಆರೋಪಿಯನ್ನಾಗಿ ಮಾಡಿಲ್ಲ. ಪರ್ಮನ್ನು ಆರೋಪಿಯನ್ನು ಮಾಡದ ಕಾರಣ ನಮ್ಮ ಕೇಸು ಕಾನೂನಿ ಮಾನ್ಯತೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

3. 2014-15 ರಲ್ಲಿ ನನಗೆ ಸಾಕಷ್ಟು ಆದಾಯ ಇಲ್ಲದ ಕಾರಣ ವ್ಯವಹಾರದಲ್ಲಿ ಆರೋಪಿಯ ಹಾಗೆ ಬೆಳೆಯಬೇಕು ಎಂದು ನಾನು ಆರೋಪಿಗೆ ಬೇಟಿ ಮಾಡಿದೆ ಎಂದರೆ ಸರಿಯಲ್ಲ. ಆರೋಪಿಗೆ ವ್ಯವಹಾರದಿಂದ ತಿಂಗಳಿಗೇ ಲಕ್ಷಾಂತರ ರೂ. ಲಾಭ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಆರೋಪಿ ಹಾಗೂ ಅವನ ಸ್ನೇಹಿತ ಪ್ರಶಾಂತ ಸೇರಿ ನನಗಿಂತಲೂ ಮೊದಲು

ಆರೋ ಪ್ಲಾಂಟನ್ನು ಇನ್ಸ್ಟಾಲ್ ಮಾಡುತ್ತಿದ್ದರು ಎನ್ನುವುದು ಗೊತ್ತಿರುವುದಿಲ್ಲ. ಆರೋಪಿ 6-7 ವ್ಯವಹಾರ ಮಾಡುತ್ತಿದ್ದ ಕಾರಣ ಅವನೊಂದಿಗೆ ನಾನು ಸೇರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಸೇರಿಕೊಂಡಿದ್ದರು ಸಹ ಉದ್ದೇಶಪೂರ್ವಕವಾಗಿ ಸೇರಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಪರ್ಮಗೆ ಸೇರಿಕೊಂಡು ನಂತರ ಆರೋಪಿ ಸುಮಾರು 25 ಲಕ್ಷ ರೂ. ಹಣ ತೊಡಗಿಸಿದ್ದು, ನಾವು ಯಾವುದೇ ತೊಡಗಿಸದೆ ಇದ್ದರು ಸಹ ನನಗೂ ಹಾಗೂ ಪ್ರಶಾಂತನಿಗೂ ಬಂದಂತಹ ಲಾಭದಲ್ಲಿ ಶೇಕಡಾ ವಾರು ಹಣ ಕೊಡುತ್ತಿದ್ದ ಎಂದರೆ ಸರಿಯಲ್ಲ. ನನಗೆ ಸಾಕಷ್ಟು ಆದಾಯ ಇಲ್ಲದ ಕಾರಣ ಇನಪೋಸಿಸ್ ಕಂಪನಿಯನ್ನು ಬಿಟ್ಟು ಬಂದಿದ್ದೆ ಎಂದರೆ ಸರಿಯಲ್ಲ. 2012 ರಲ್ಲಿ ನನ್ನ ವಿವಾಹ ಆಗಿರುತ್ತದೆ. 2014-15 ರಿಂದ 2018-19 ರವರೆಗೆ ಆರೋಪಿಯ ಪರ್ಮ ನಿಂದ 10-12 ಆರೋ ಪ್ಲಾಂಟನ್ನು ಇನ್ಸ್ಟಾಲ್ ಆಗಿದ್ದು ಅದರಲ್ಲಿ ನಾನು ಭಾಗಿದಾರ ಇರುತ್ತೇನೆ ಎಂದರೆ ಸರಿಯಲ್ಲ. ಆರೋ ಪ್ಲಾಂಟನ್ನು ಇನ್ಸ್ಟಾಲ್ ಮಾಡಿದಾಗ 3 ವರ್ಷ ವಾರಂಟಿ ಪೀರೆಡ್ ಇದ್ದು, 75 ಸಾವಿರ ರೂ.ಗಳನ್ನು ಮುಂಗಡವಾಗಿ ಠೇವಣಿ ಮಾಡಬೇಕು ಅದರಲ್ಲಿ ಪ್ರತಿ ವರ್ಷ 25 ಸಾವಿರ ರೂ. ಮರಳಿ ಸಂದಾಯವಾಗುತ್ತದೆ ಎಂದರೆ ಸರಿಯಲ್ಲ. ಆರೋಪಿ ನನಗೆ ಸ್ನೇಹಿತ ಇದ್ದ ಕಾರಣ ಆರೋ ಪ್ಲಾಂಟನ್ನು ಇನ್ಸ್ಟಾಲ್ ನನಗೂ ಹಾಗೂ ಪ್ರಶಾಂತನಿಗೂ ನೋಡಿ ಕೊಂಡು ಹೋಗಲು ಕೊಟ್ಟಿದ್ದ ಎಂದರೆ ಸರಿಯಲ್ಲ. ಆರೋಪಿ ಬೇರೆ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದರಿಂದ ಈ ಆರೋ ಪ್ಲಾಂಟನ್ನು ಇನ್ಸ್ಟಾಲ್ ನಮಗೆ ನೋಡಿಕೊಂಡು ಹೋಗಲು ಬಿಟ್ಟಿದ್ದ ಎಂದರೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಾನೇ ಓಡಾಡಿ ಆರೋ ಪ್ಲಾಂಟಗಳನ್ನು ಇನ್ಸ್ಟಾಲ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋ ಪ್ಲಾಂಟ್ ಉದ್ಘಾಟನೆಯ ಸಮಯದಲ್ಲಿ ಶೀಲಾನ್ಯಾಸದಲ್ಲಿ ಆರೋಪಿಯ ಹೆಸರಿನ ಬದಲಾಗಿ ನನ್ನ ಹೆಸರನ್ನೆ ಹಾಕಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋ ಪ್ಲಾಂಟಗಳ ಉದ್ಘಾಟನೆಯ ಪೋಟೋಗಳಲ್ಲಿ ನಾನು ಇದ್ದೆ ಅನ್ನುವುದು ನಿಜ. 2015 ಸೆಪ್ಟಂಬರನಲ್ಲಿ ಆರೋಪಿಯ ತಂದೆ ಮೌಂಟ ಅಬು ನಲ್ಲಿ ಮೃತ ಪಟ್ಟಿದ್ದರಿಂದ ಆರೋಪಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದರಿಂದ ಆರೋ ಪ್ಲಾಂಟ್ ನ್ನು ನನಗೆ ವಹಿಸಿಕೊಟ್ಟಿದ್ದ ಎಂದರೆ ಸರಿಯಲ್ಲ. ಆರೋ ಇನ್ಸ್ಟಾಲೇಷನ್ ಸಲುವಾಗಿ ಜಿಲ್ಲಾ ಪಂಚಾಯತ. ತಾಲೂಕ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಯಲ್ಲಿ ಪತ್ರ ವ್ಯವಹಾರ ನಾನೇ ಮಾಡಿದ್ದು ಸದರಿ ಪತ್ರದಲ್ಲಿ ನನ್ನ ಹಸ್ತಾಕ್ಷರ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ತಂದೆ ಮೃತ ಪಟ್ಟ ನಂತರ ಆರೋ ಪ್ಲಾಂಟ್ ಇನ್ಸ್ಟಾಲೇಷನಗೆ ಸಂಬಂಧ ಪಟ್ಟಂತೆ ಚೆಕ್ಕನ್ನು ಬರೆಯುವುದು, ಹಣ ಬಿಡಿಸಿಕೊಳ್ಳುವುದು,

ನೆಪ್ಟ, ಡಿಡಿ, ಎಫ್. ಡಿ. ಎಲ್ಲ ವ್ಯವಹಾರವನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬ್ಯಾಂಕಿನ ವ್ಯವಹಾರದ ದಾಖಲೆಗಳನ್ನು ತರಿಸಲು ತೊಂದರೆ ಇರುವುದಿಲ್ಲ. 2016 ರಲ್ಲಿ ನಾನು ಪರ್ಮನ್ನು ತೆಗಯುವಾಗ ಆರೋಪಿ ನನಗೆ ಆರ್ಥಿಕವಾಗಿ ಸಹಾಯ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರ್. ಬಿ. ಎಂಟರ್ ಪ್ರೈಸಸ್ ಹೆಸರಿನಲ್ಲಿ ರಟ್ಟೀಹಳ್ಳಿಯ ಕರ್ನಾಟಕ ಬ್ಯಾಂಕ ಹಾಗೂ ಹಿರೇಕೆರೂರಿನ ಯೂನಿಯನ್ ಬ್ಯಾಂಕಿನಲ್ಲಿ ಖಾತೆ ಇರುತ್ತವೆ. ನಮ್ಮ ಮೂಲ ಊರು ಹಿರೇಕೆರೂರು ತಾಲೂಕು ಸುತ್ತಕೋಟಿ ಗ್ರಾಮ. ಹಿರೇಕೆರೂರಿನಿಂದ ಸುತ್ತಕೋಟಿ ಸುಮಾರು 15 ಕಿ. ಮೀ ದುಾರ ಇರುತ್ತದೆ. ಸುತ್ತಕೋಟಿಯಿಂದ ರಟ್ಟೀಹಳ್ಳಿ 25 ಕಿ. ಮೀ ದೂರ ಇರುತ್ತದೆ. ರಟ್ಟೀಹಳ್ಳಿ ಕರ್ನಾಟಕ ಬ್ಯಾಂಕನಲ್ಲಿ 2016-17 ಖಾತೆಯನ್ನು ತೆಗೆದಿರುತ್ತದೆ. ಆರೋಪಿಯ ಪರ್ಮನಿಂದ ನಮ್ಮ ಆರ್. ಬಿ. ಎಂಟರ್ ಪ್ರೈಸಸ್ ಗೆ ದಿಃ 30-12-2016 ರಂದು 18 ಲಕ್ಷ 64 ಸಾವಿರ ವರ್ಗಾವಣೆ ಆಗಿರುತ್ತದೆ ಎನ್ನುವುದು ನಿಜ. ನನ್ನ ಹಾಗೂ ಆರೋಪಿಯ ಮಧ್ಯ 2012 ರಿಂದ ಹಣ ಕಾಸಿನ ವ್ಯವಹಾರ ಇದೆ. ಆರೋಪಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನಿಂದ ಹಣ ಪಡೆದು ವಾಪಸ್ಸು ಕೊಡುತ್ತಿದ್ದ. ಆರೋಪಿಗೆ ನನ್ನಿಂದ ಹಣ ತೆಗೆದುಕೊಂಡ ಕುರಿತು ಸ್ವಲ್ಪ ದಾಖಲೆಗಳು ಇರುತ್ತವೆ. ಆರೋಪಿಗೆ ನಾನು ಖಾತೆಯ ಮೂಲಕವೆ ಹಣ ಕೊಟ್ಟಿರುತ್ತೇನೆ. 2016 ರಲ್ಲಿ ಪರ್ಮ ತೆರೆದ ನಂತರ ಹಣ ಕೊಟ್ಟೆತ್ತೊ ಅಥವಾ ಮೊದಲು ಕೊಟ್ಟೆತ್ತೊ ಎಂದು ನೆನಪಿರುವುದಿಲ್ಲ. ಪರ್ಮ ಖಾತೆಯಿಂದ ಹಣ ಕೊಟ್ಟೆತ್ತೊ ಅಥವಾ ವೈಯಕ್ತಿಕ ಖಾತೆಯಿಂದ ಹಣ ಕೊಟ್ಟೆತ್ತೊ ಎಂದು ನೆನಪಿರುವುದಿಲ್ಲ. ಹಣ ಕೊಟ್ಟ ಕುರಿತು ಡೈರಿಯಲ್ಲಿ ನಾನು ನಮೂದು ಮಾಡಿಲ್ಲ. ರಿಟರ್ಸನಲ್ಲಿ ನನಗೆ ಬರಬೇಕಾದ ಹಣ ಹಾಗೂ ನನ್ನಿಂದ ಬೇರೆಯವರಿಗೆ ಹೋಗಬೇಕಾದ ಹಣ ಬಗ್ಗೆ ನಮೂದು ಮಾಡಿರುತ್ತೇನೆ. 2016 -17 ರಿಂದ ನಾನು ರಿಟರ್ಸ ಸಲ್ಲಿಸುತ್ತಿದ್ದೇನೆ. ಆರೋಪಿಗೆ ಕೊಟ್ಟ ಹಣ ಬಗ್ಗೆ 2016-17 ರ ರಿಟರ್ಸ ನಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಅದರಲ್ಲಿ ನಮ್ಮ ತಂದೆಯ ಹಣ,ನನ್ನ ತಮ್ಮನ ಹಣ ಹಾಗೂ ನನ್ನ ಹಣ ಇತ್ತು ಹಾಗಾಗಿ ಹೇಳಿಲ್ಲ ಎಂದು ಹೇಳುತ್ತಾರೆ. ನಮ್ಮ ಪರ್ಮನಲ್ಲಿ ನಮ್ಮ ತಂದೆಯ ಹಣ,ನನ್ನ ತಮ್ಮನ ಹಣ ಇರುತ್ತದೆ. ಅವರ ಹಣ ನಗದು ರೂಪದಲ್ಲಿ ಇರುತ್ತದೆ. ಪರ್ಮನ್ನು ತೆರೆದಾಗ ಬಂಡವಾಳದಲ್ಲಿ ನಮ್ಮ ತಂದೆಯದು ಎಷ್ಟು ಹಾಗೂ ನಮ್ಮ ತಮ್ಮನದು ಎಷ್ಟು ಹಣ ಇತ್ತು ಎಂದು ಹೇಳಿಲ್ಲ. ಆರೋಪಿಗೆ ನಾನು ಖಾತೆಯ ಮೂಲಕ ಹಣ ಕೊಟ್ಟಿಲ್ಲ. ನಮ್ಮದು ವ್ಯವಹಾರ ಇದ್ದ ಕಾರಣ ನಾವು ಯಾವುದೇ ಹಣ ಕೊಡುವುದಿದ್ದರು ಸಹ ನಾವು ಖಾತೆಯ ಮೂಲಕ

ಕೊಡುತ್ತೇವೆ ಎನ್ನುವುದು ನಿಜ. 18 ಲಕ್ಷ 64 ಸಾವಿರ ರೂ.ಗಳನ್ನು ಆರೋಪಿ ಕೊಡಬೇಕಾಗಿರುವುದನ್ನು ನನಗೆ ಕೊಟ್ಟಿರುತ್ತಾನೆ. ಆರೋಪಿ ನನ್ನಿಂದ ಹಣ ಪಡೆದ ಬಗ್ಗೆ ದಾಖಲೆಗಳು ಇಲ್ಲ. ನಾನು ಆರೋಪಿ ಒಂದು ರೂಪಯಿಯನ್ನು ಕೊಟ್ಟಿಲ್ಲ ಹಾಗಾಗಿ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಆರ್. ಬಿ. ಎಂಟರ್ ಪ್ರೈಸಸನ್ನು ಹೊಸದಾಗಿ ಪ್ರಾರಂಭಿಸಿದ ಕಾರಣ ನನ್ನ ರೀತಿಯಲ್ಲಿ ವ್ಯವಹಾರದಲ್ಲಿ ಬೆಳೆಯಲಿ ಎಂದು ನಾನು 30 ಲಕ್ಷ ಹಣ ಕೇಳಿದ್ದು, ಆರೋಪಿ ಆರೋ ಯುನಿಟ್ ನಿಂದ ಬಂದಂತಹ 18 ಲಕ್ಷ 64 ರೂ.ಗಳನ್ನು ನನಗೆ ಕೊಟ್ಟಿದ್ದ ಎಂದರೆ ಸರಿಯಲ್ಲ. ದಿಃ 10-07-2017 ರಂದು ಆರೋಪಿ ತನ್ನ ವೈಯಕ್ತಿಕ ಖಾತೆಯಿಂದ ಆರ್ ಟಿ ಜಿ ಎಸ್ ಮೂಲಕ 5 ಲಕ್ಷ 61 ಸಾವಿರ ರೂ.ಗಳನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿರುತ್ತಾನೆ ಎನ್ನುವುದು ನಿಜ. ಮೇಲೆ ಹೇಳಿದ 2 ಮೊತ್ತವನ್ನು ನಾನು ಆರೋಪಿಯ ಅತ್ಯಂತ ನಂಬಿಕಸ್ಥ ಗೆಳೆಯ ಇದ್ದ ಕಾರಣ ನಾನು ಬೆಳೆಯಲಿ ಎಂದು ನನಗೆ ಕೊಟ್ಟಿದ್ದ ಎಂದರೆ ಸರಿಯಲ್ಲ. 26 ಲಕ್ಷ ರೂ.ಗಳನ್ನು ನಾನು ಆರೋಪಿಗೆ ಕೊಡಬಾರದು ಎನ್ನುವ ಕಾರಣ ಆರೋಪಿಯ ತಂದೆ ಮೃತಪಟ್ಟಾಗ ನಾನು ಅವರ ವ್ಯವಹಾರ ನೋಡಿಕೊಳ್ಳುತ್ತಿದ್ದಾಗ ಆರೋಪಿ ವ್ಯವಹಾರಕ್ಕೆ ಅನುಕೂಲ ಆಗಿಲಿ ಎಂದು ಖಾಲಿ ಚೆಕ್ಕುಗಳ ಮೇಲೆ ಸಹಿ ಮಾಡಿರುವ 2 ಚೆಕ್ಕುಗಳನ್ನು ಪಡೆದುಕೊಂಡು ಈ ಕೇಸನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 18-04-2017 ರಂದು ನನ್ನ ವೈಯಕ್ತಿಕ ಖಾತೆಗೆ ಆರೋಪಿಯ ವೈಯಕ್ತಿಕ ಖಾತೆಯಿಂದ 27 ಸಾವಿರ ಜಮಾ ಆಗಿದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಆರೋಪಿಯ ಪರ್ಮ್ ಹಾಗೂ ಅವರ ವೈಯಕ್ತಿಕ ಖಾತೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾಗ 8-10 ಲಕ್ಷ ರೂ.ಗಳನ್ನು ನಾನು ಸ್ವತಃ ಬ್ಯಾಂಕಿನಿಂದ ಬಿಡಿಸಿಕೊಂಡಿದ್ದನ್ನು ಆರೋಪಿ ನನ್ನನ್ನು ಕೇಳಿಲ್ಲ ಎಂದರೆ ಸರಿಯಲ್ಲ.

*ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.*

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 14-06-2022

ಸಹಿ/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು